[Govt. of Karnataka C.R.P. 67]

| Deposition Sheets (RP.No.57) Form No.4 (Civil) |
|---|

**IN THE COURT OF <u>CIVIL JUDGE & J.M.F.C., KARKALA.</u>**

**Criminal Case No. 1707/2022**

**...................................................Vs....................................**

ಪಿ.ಡಬ್ಲ್ಯು : 2 ಸಿ.ಡಬ್ಲ್ಯು : 2

ಸಾಕ್ಷಿದಾರನ ಹೆಸರು : ಉಲ್ಲಾಸ್ ಇಂಗಳೇಶ್ವರ

ತಂದೆಯ ಹೆಸರು : ಯಮನಪ್ಪ

ಪ್ರಾಯ : 36 ವರ್ಷ

ಉದ್ಯೋಗ : ಪೊಲೀಸ್ ಪೇದೆ , ಹೆಬ್ರಿ ಪೊಲೀಸ್ ಠಾಣೆ

ವಾಸ : ಹೆಬ್ರಿ

ದಿನಾಂಕ 11.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ನಾನು ದಿಃ06.08.2017 ರಿಂದ ಹೆಬ್ರಿ ಪೋಲಿಸ್ ಠಾಣೆಯಲ್ಲಿ ಪೊಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

2. ದಿಃ 12.04.2022 ರಂದು ಅಕ್ರಮ ಗೋ ತಡೆಯ ಬಗ್ಗೆ ಚಾಸಾ-1 ಮತ್ತು 3 ರವರ ಜೂತೆ ವಿಶೇಷ ಗಸ್ತು ಕರ್ತವ್ಯದಲ್ಲಿದ್ದಾಗ ದಿಃ13.04.2022 ರಂದು ಮುಂಜಾನೆ 2.00 ಗಂಟೆಗೆ ಸೋಮೇಶ್ವರ ಜಂಕ್ಷನ್ ಬಳಿ ವಾಹನ ತಪಾಸಣೆ ಮಾಡುತ್ತಿರುವಾಗ ನಾಡ್ಪಾಲ್ ಗ್ರಾಮದ ಕಾಸನಮಕ್ಕಿ ಕಡೆಯಿಂದ ಒಂದು ವಾಹನ ಅತೀವೇಗ ಹಾಗೂ ಅಜಾಗರುಾಕತೆಯಿಂದ ಬರುತ್ತಿದ್ದನ್ನು ಕಂಡು ನಿಲ್ಲಿಸಲು ಸೂಚಿಸಿದಾಗ ವಾಹನವು ನಿಲ್ಲಿಸದೆ ಉಡುಪಿ ಕಡೆಗೆ ವೇಗವಾಗಿ ಹೋಗಿರುತ್ತದೆ. ಸದ್ರಿ ವಾಹನದ ಹಿಂಬದಿ ಟರ್ಪಲ್ ನಿಂದ ಮುಚ್ಚಿರುವುದು ಕಂಡು ಅನುಮಾನಗೊಂಡು ನಾವು ಸದ್ರಿ ವಾಹನವನ್ನು ಬೆನ್ನಟ್ಟಿದಾಗ

ಸೀತಾನದಿ , ಕೈಕಂಬ ಬಜ್ಜಪ್ಪು, ಮುಧ್ರಾಡಿ, ಬ್ರಕ್ರೆ ರಸ್ತೆಯಿಂದ ಉಡುಪಿಯ ಕಡೆಗೆ ಹೋಗುವಾಗ ತಪ್ಪಿ ಸುವ ಭರದಲ್ಲಿ ಎಡಗಡೆ ತಿರುಗಿ ಒಂದುಅಂಗಡಿಗೆ ಢಿಕ್ಕಿ ಹೊಡೆದು ನಿಂತಿರುತ್ತದೆ. ತಕ್ಷಣ ವಾಹನದ ಹಿಂದುಗಡೆಯಿಂದ ಇಬ್ಬರು ವ್ಯಕ್ತಿಗಳು ಹಾಗೂ ವಾಹನದ ಮುಂಬದಿಯ ಕ್ಯಾಬ್ ನಿಂದ 3 ವ್ಯಕ್ತಿಗಳು ಹಾರಿ ಹೋಗಿರುತ್ತಾರೆ. ನಾವು ಅವರನ್ನು ಟಾರ್ಚ್ ಬೆಳಕಿನ ಸಹಾಯದಿಂದ ಬೆನ್ನಟ್ಟಿದಾಗ ಆರೋಪಿಗಳು ಕಾಡಿನ ಒಳಗೆ ಓಡಿ ಹೋಗಿ ಮರೆಯಾಗಿರುತ್ತಾರೆ.

ನಂತರ ನಾವು ವಾಹನದ ಕಡೆಗೆ ಬಂದು ವಾಹನದ ಹೆಡ್ ಲೈಟ್ ಸಹಾಯದಿಂದ ಹಾಗೂ ಕೈಯಲ್ಲಿದ್ದ ಟಾರ್ಚ್ ಲೈಟ್ ಸಹಾಯದಿಂದ ಷದ್ರಿ ವಾಹನದ ಕ್ಯಾಬಿನ್ ನ್ನು ಪರಿಶೀಲಿಸಿದಾಗ ಕ್ಯಾಬಿನ್ ನಲ್ಲಿ ಒಂದು ನೋಕಿಯಾ ಕಂಪನಿಯ ಕೀ ಪ್ಯಾಡ್ ಮೊಬೈಲ್ ಸಿಕ್ಕಿರುತ್ತದೆ. ವಾಹನದ ಚಾಲಕ ಸೀಟಿನ ಕೆಳಗಡೆ ಪರಿಶೀಲಿಸಿದಾಗ ಒಂದು ಮರದ ಹಿಡಿ ಇರುವ ಕಬ್ಬಿಣದ ಮೊಂಡು ಕತ್ತಿ, ಕಬ್ಬಿಣದ ಹಿಡಿ ಇರುವ ತೆಳ್ಳನೆಯ ತಲವಾರು ಕಂಡು ಬಂದಿರುತ್ತದೆ. ನಮಗೆ ಷದ್ರಿ ಕತ್ತಿಗಳು ಯಾರಾದರೂ ತಮ್ಮನ್ನು ಅಡ್ಡಹಾಕಿದರೆ ಅವರಿಗೆ ಬೆದರಿಸಲು ಇಟ್ಟಿರಬಹುದು ಎಂದು ಅನುಮಾನ ಉಂಟಾಗಿರುತ್ತದೆ.

ನಂತರ ಷದ್ರಿ ವಾಹನದ ಹಿಂಬದಿಗೆ ಬಂದು ಕಪ್ಪು ಬಣ್ಣದ ಟಾರ್ಪಲ್ ನ್ನು ಎತ್ತಿ ನೋಡಿದಾಗ ಜಾನುವಾರುಗಳನ್ನು ಯಾದ್ವತದ್ವಾವಾಗಿ ತುಂಬಿಸಿ ಸದರಿ ಜಾನುವಾರುಗಳ ಕಾಲಿಗೆ ಮತ್ತು ಕುತ್ತಿಗೆಗೆ ಹಿಂಸೆಯಾಗುವ ರೀತಿಯಲ್ಲಿ ಹುರಿ ಹಗ್ಗದಿಂದ ಕಟ್ಟಿರುವುದು ಕಂಡು ಬಂದಿರುತ್ತದೆ. ಅವುಗಳನ್ನು ಪರಿಶೀಲಿಸಿದಾಗ ಅದರಲ್ಲಿ ಒಟ್ಟು 14 ಜಾನುವಾರು ಇದ್ದು ಅವುಗಳಲ್ಲಿ ಒಂದು ಜಾನುವಾರು ಮೃತಪಟ್ಟಿರುವುದು ಕಂಡುಬಂದಿತ್ತು. ಅವುಗಳಿಗೆ ಕಟ್ಟಿದ್ದ ಒಟ್ಟು 20 ಹಗ್ಗಗಳು ಇದ್ದವು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮೊಂಡು ಕತ್ತಿ ಹಾಗೂ ತಲವಾರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ-1 ಮತ್ತು 2 ಎಂದು ಗುರುತಿಸಲಾಗಿದ್ದು , ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಹುರಿ ಹಗ್ಗವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ-3 ಎಂದು ಗುರುತಿಸಲಾಗಿದೆ.

ನಂತರ ಚಾಸಾ-1 ರವರ ಉಕ್ತಲೇಖನದಂತೆ ನಾನು ನನ್ನ ಕೈ ಬರಹದಲ್ಲಿ ವರದಿಯನ್ನು ಬರೆದಿರುತ್ತೇನೆ. ಸಾಕ್ಷಿಯು ಷದ್ರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ.

ನಂತರ ಚಾಸಾ-1 ರವರು ಸದರಿ ವರದಿಯನ್ನು ಠಾಣೆಗೆ ತೆಗೆದುಕೊಂಡು ಹೋಗಿ ಪ್ರ ವ ವರದಿಯನ್ನು ತಯಾರಿಸಿ ಕಡತವನ್ನು ತೆಗೆದುಕೊಂಡು ಬಾ ಎಂದು  ನನ್ನಲ್ಲಿ ಆದೇಶಿಸಿದ್ದು ನಾನು ಚಾಸಾ-1 ರವರ ಆದೇಶದಂತೆ ಸದರಿ ನಿಪಿ-1 ವರದಿಯನ್ನು ಠಾಣೆಗೆ ತೆಗೆದುಕೊಂಡು ಹೋಗಿ ಚಾಸಾ-19 ರವರಿಗೆ ನೀಡಿದ್ದು. ಚಾಸಾ-19 ರವರು  ಪ್ರ ವ ವರದಿಯನ್ನು ತಯಾರಿಸಿ ನನಗೆ ನೀಡಿದ್ದನ್ನು ನಾನು ಪುನಃ ಘಟನಾ ಸ್ಥಳಕ್ಕೆ ಬಂದು ಚಾಸಾ-1 ರವರಿಗೆ ನೀಡಿರುತ್ತೇನೆ.

ನಂತರ ಚಾಸಾ-1 ರವರು ಚಾಸಾ-4 ಮತ್ತು 5 ರವರನ್ನು ಪಂಚರಾಗಿ ಬರಮಾಡಿಕೊಂಡು ಅವರ ಸಮಕ್ಷಮ ಚಾಸಾ-1 ರವರ ಉಕ್ತಲೇಖನದಂತೆ ಪಂಚರ ಸಮಕ್ಷಮ ಮಹಜರನ್ನು ನನ್ನ ಕೈ ಬರಹದ ಮೂಲಕ ಬರೆದಿರುತ್ತೇನೆ. ಚಸಾ-1 ರವರು ಮಹಜರು ಸಮಯದಲ್ಲಿ ಮು ಮಾ-1 ರಿಂದ 3, ಹಾಗೂ 14 ಜಾನುವಾರು ಸ್ದ್ರಿಜಾನುವಾರುಗಳಲ್ಲಿ ಒಂದು ಜಾನುವಾರು ಮೃತಪಟ್ಟಿರುತ್ತದೆ, ಒಂದು ಟಾಟಾ ಕಂಪನಿಯ ಹಳದಿ ಮೆರುನ್ ಬಣ್ಣದ ಝುನನ್ ಪಿಕಪ್ ಟಾಟಾ ಯೋಾದ ಎಂದು ಬರೆದಿರುವ ವಾಹನ ಮತ್ತು ನೋಕಿಯಾ ಕಂಪನಿಯ ಕೀ ಪ್ಯಾಡ್ ಇರುವ ಮೊಬೈಲ್ ನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ಸ್ದ್ರಿ ಜಾನುವಾರುಗಳ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-3 ರಿಂದ 16 ಎಂದು ಗುರುತಿಸಲಾಗಿದ್ದು ಸಾಕ್ಷಿಯು ಸದರಿ ವಾಹನದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-17 ಎಂದು ಗುರುತಿಸಲಾಗಿದೆ.  ಸಾಕ್ಷಿಯು ಸ್ದ್ರಿ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ದಿಃ16.05.2022 ರಂದು  1 ರಿಂದ  3 ನೇ ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು ಅವರನ್ನು ಚಾಸಾ-20 ರವರು ವಿಚಾರಣೆ ಮಾಡಿದ್ದು ವಿಚಾರಣೆ ಸಮಯ ಆರೋಪಿತರು ತಾವುಗಳು ಕೆಎ-19-ಡಿ-9907 ವಾಹನದಲ್ಲಿ ನಾಡ್ಪಾಲ್ ಗ್ರಾಮದ ದುಲ್ಲಿ, ಅಂಗಡಿಬೆಟ್ಟು, ಬೇಳಂಜೆ ತೆಂಕೋಲ ಗಳಲ್ಲಿ ರಸ್ತೆಯ ಬದಿಯಲ್ಲಿ ಮಲಗಿದ್ದ ಜಾನುವಾರುಗಳನ್ನು ಕಳುವು ಮಾಡಿ ತುಂಬಿಸಿಕೊಂಡು ಬಂದಿರುತ್ತೇವೆ ಸದರಿ ವಾಹನವನ್ನು 2 ನೇ ಆರೋಪಿಯು ಚಲಾಯಿಸಿದ್ದರು ಎಂದು ಚಾಸಾ-20 ರವರಿಗೆ ಆರೋಾಪಿತರ ಹೇಳಿಕೆಯನ್ನು ನೀಡಿರುತ್ತಾರೆ. ಅದೇ ಸಮಯ 1

ರಿಂದ 3 ನೇ ಆರೋಪಿತರು ಘಟನಾ ಸಮಯದಲ್ಲಿ ನಮ್ಮೊಂದಿಗೆ 4 ಮತ್ತು 5 ನೇ ಆರೋಪಿತರು ಇದ್ದರು ಎಂದು ಹೇಳಿಕೆ ನೀಡಿರುತ್ತಾರೆ. ಆ ಸಂದರ್ಭ ಚಾಸಾ-20 ರವರೊಂದಿಗೆ ಇದ್ದಿರುತ್ತೇನೆ. ಅದೇ ದಿನ 1 ರಿಂದ 3 ನೇ ಆರೋಪಿತರು ಹಾಗೂ ಚಾಸಾ-20 ರವರ ಜೊತೆ ನಾಡ್ಪಾಲ್ ಗ್ರಾಮದ ದುಲ್ಲಿ, ಅಂಗಡಿಬೆಟ್ಟು, ಬೇಳಂಜೆ ತೆಂಕೋಲ ಗಳಲ್ಲಿ ಸ್ಥಳಕ್ಕೆ ಭೇಟಿ ನೀಡಿ ಚಾಸಾ-20 ರವರ ಉಕ್ತಲೇಖನದಂತೆ ತಕ್ಷೀರು ಸ್ಥಳಗಳಲ್ಲಿ ನನ್ನ ಕೈ ಬರಹದ ಮೂಲಕ ಮಹಜರನ್ನು ಬರೆದಿರುತ್ತೇನೆ. ಸಾಕ್ಷಿಯು ಸದ್ರಿ ನಾಡ್ಪಾಲ್ ಗ್ರಾಮದ ದುಲ್ಲಿ ಎಂಬಲ್ಲಿ ಬರೆದಿರುವ ಮಹರಜನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-22 ಎಂದು, ಸಾಕ್ಷಿಯ ಸಹಿಯನ್ನು ನಿಪಿ-22(ಎ) ಎಂದು, ನಾಡ್ಪಾಲ್ ಗ್ರಾಮದ ಅಂಗಡಿಬೆಟ್ಟು ಎಂಬಲ್ಲಿ ಬರೆದಿರುವ ಮಹರಜನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-23 ಎಂದು, ಸಾಕ್ಷಿಯ ಸಹಿಯನ್ನು ನಿಪಿ-23(ಎ) ಎಂದು, ಬೇಳಂಜೆ ಗ್ರಾಮದ ತೆಂಕೋಲ ಎಂಬಲ್ಲಿ ಬರೆದಿರುವ ಮಹರಜನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-24 ಎಂದು, ಸಾಕ್ಷಿಯ ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-20 ರವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

ದಿಃ13.08.2022 4 ಮತ್ತು 5 ನೇ ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದು ಪೊಲೀಸ್ ಠಾಣೆಗೆ ಹಾಜರಾಗಿ ಚಾಸಾ-20 ರವರ ಮುಂದೆ ಹಾಜರಾಗಿದ್ದು ಚಾಸಾ-20 ರವರು ನನ್ನನ್ನು ಕರೆದು ಆರೋಪಿತರನ್ನು ತೋರಿಸಿರುತ್ತಾರೆ. ಚಾಸಾ-20 ರವರು ಆರೋಪಿತರನ್ನು ವಿಚಾರಣೆ ಮಾಡಿದಾಗ ಆರೋಪಿತರು ತಾವು 1 ರಿಂದ 3 ನೇ ಅರೋಪಿತರೊಂದಿಗೆ ಸೇರಿ ನಾಡ್ಪಾಲ್ ಗ್ರಾಮದ ದುಲ್ಲಿ, ಅಂಗಡಿಬೆಟ್ಟು, ಬೇಳಂಜೆ ತೆಂಕೋಲ ಗಳಲ್ಲಿ ರಸ್ತೆಯ ಬದಿಯಲ್ಲಿ ಮಲಗಿದ್ದ ಜಾನುವಾರುಗಳನ್ನು ಕಳ್ಳತನ ಮಾಡಿರುತ್ತೇವೆ ಎಂದು ಒಪ್ಪಿ ಕೊಂಡಿರುತ್ತಾರೆ. ಸದರಿ ಸಮಯ ಚಾಸಾ-20 ರವರೊಂದಿಗೆ ಇದ್ದೇನು. ಅದೇ ದಿನ ನಾನು ಚಾಸಾ-20 ರವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ಹೆಚ್ ಅರ್ ಕೆ ವಕೀಲರಿಂದಃ

ಸೋಮೇಶ್ವರ ಜಂಕ್ಷನ್ ಬಳಿ ಜಿಲ್ಲಾ ಗಡಿ ಚೆಕ್ ಪೋಸ್ಟ್ ಇದ್ದು ಅಲ್ಲಿ ಬ್ಯಾರಿಕೇಡರ್ ಹಾಕಿ ಪ್ರತಿದಿನ ನಮ್ಮ 2 ರಿಂದ 3 ಸಿಬ್ಬಂದಿಗಳು ತಪಾಸಣೆಯನ್ನು ಮಾಡುತ್ತಿರುತ್ತಾರೆ. ನಾವು ದಿಃ13.04.2022 ಮುಂಜನೆ 1.55 ಕ್ಕೆ ನಾವು ಘಟನಾ ಸ್ಥಳಕ್ಕೆ ಹೋಗಿದ್ದೇವು. ನಾವು ಸದರಿ ಸ್ಥಳದಲ್ಲಿ ಸೋಮೇಶ್ವರ ಕಡೆಯಿಂದ ಕಾಸನಮಕ್ಕಿ ಕಡೆಗೆ ಹೋಗುವ

ಒಂದರಿಂದ 2 ವಾಹನಗಳನ್ನು ತಪಾಸಣೆ ಮಾಡಿರುತ್ತೇವೆ. ನಾವು ವಾಹನ ತಪಾಸಣೆ ಮಾಡುವಾಗ ಯಾವುದೇ ರಿಜಿಸ್ಟರ್ ನ್ನು ನಿರ್ವಹಿಸುವುದಿಲ್ಲ. ಅದನ್ನು ಚೆಕ್ ಪೋಸ್ಟ್ ನಲ್ಲಿ ಮಾತ್ರ ನಿರ್ವಹಿಸುತ್ತಾರೆ. ವಾಹನವು ಕಾಸನಮಕ್ಕಿ ಕಡೆಯಿಂದ ಬರುವಾಗ ಟಾರ್ಚ್ ಲೈಟ್ ನಲ್ಲಿ ನೋಡಿದಾಗ ಸದ್ರಿ ವಾಹನದ ಕ್ಯಾಬಿನಲ್ಲಿ 3 ಜನ ಕುಳಿತಿರುವುದು ಕಂಡುಬಂದಿರುತ್ತದೆ. ಸದ್ರಿ 3 ಜನ ವ್ಯಕ್ತಿಗಳಲ್ಲಿ ಒಬ್ಬ ಚಾಲಕ ರಹೀಮ್ ಮತ್ತಿಬ್ಬರು ಅಜೀಜ್ ಮತ್ತು ಹಸನಬ್ಬ ಆಗಿರುತ್ತಾರೆ. ಸದ್ರಿ ವಾಹನವನ್ನು 200 ಮೀಟರ್ ದೂರದಿಂದ ಗಮನಿಸಿರುತ್ತೇವೆ. ನಾವು ನಿಲ್ಲಿಸಲು ಸೂಚನೆ ನೀಡಿದರೂ ಸಹ ವಾಹನವು ಬರುತ್ತಿದ್ದ ವೇಗದಲ್ಲಿಯೇ ಹೋಗಿರುತ್ತದೆ. ಸದರಿ ರಹೀಮ್, ಅಜೀಜ್ ಮತ್ತು ಹಸನಬ್ಬ ರವರನ್ನು ಈ ಪ್ರಶ್ನಿತ ಪ್ರಕರಣದ ಪೂರ್ವದಲ್ಲಿ ನೋಡಿರುವುದಿಲ್ಲ. ನಾವು ಸದರಿ ವಾಹನವನ್ನು ಸುಮಾರು 13-14 ಕಿ ಮೀ ಬೆನ್ನಟ್ಟಿರುತ್ತೇವೆ. ನಾವು ಬೆನ್ನಟ್ಟಿದ್ದೇವೆ ಎನ್ನುವ ವಿಚಾರವನ್ನು ಹೆಬ್ರಿ ಠಾಣಾಧಿಕಾರಿಗೆ ತಿಳಿಸಿರುವುದಿಲ್ಲ.

ನಾವು ವಾಹನದಿಂದ ಇಳಿದ ವ್ಯಕ್ತಿಗಳನ್ನು 50-60 ಮೀಟರ್ ದೂರ ಬೆನ್ನಟ್ಟಿರುತ್ತೇವೆ. ನನ್ನ ಹೇಳಿಕೆಯಲ್ಲಿ ಕಾಡಿನ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ಸದರಿ ಘಟನಾ ಸ್ಥಳದಲ್ಲಿ ಭಾವಚಿತ್ರ ಹಾಗೂ ವಿಡಿಯೋ ಮಾಡಿರುತ್ತಾರೂ ಎಂದು ನಾನು ಗಮನಿಸಿರುವುದಿಲ್ಲ, ಆದರೆ ಚಾಸಾ-1 ರವರು ತಮ್ಮ ಕೈಯಲ್ಲಿ ಮೊಬೈಲ್ ಹಿಡಿದಿದ್ದು ಪ್ಲಾಶ್ ಲೈಟ್ ನ್ನು ಆನ್ ಆಗಿರುತ್ತದೆ., ಆದರೆ ಅದು ಭಾವಚಿತ್ರ ತೆಗೆಯಲೋ ವಿಡಿಯೋ ಮಾಡಲೋ ಎಂದು ನನಗೆ ಗೊತ್ತಿಲ್ಲ.

ನಾನು ನಿಪಿ-1 ವರದಿಯನ್ನು ತೆಗೆದುಕೊಂಡು ಠಾಣೆಗೆ ಹೋಗಿ ಮುಂಜಾನೆ 3.15 ರಿಂದ 3.45 ರವರೆಗೆ ಇದ್ದೇನು. ನಾನು ಠಾಣೆಯಿಂದ ಕಡತವನ್ನು ತೆಗೆದುಕೊಂಡು ತಿಕ್ಷೀರು ಸ್ಥಳಕ್ಕೆ ಬಂದಾಗ ಮುಂಜಾನೆ 4.30 ಗಂಟೆ ಆಗಿರುತ್ತದೆ. ನಿಪಿ-1 ಮತ್ತು 2 ರಲ್ಲಿ 3 ಜನ ವ್ಯಕ್ತಿಗಳನ್ನು ಗುರುತಿಸಿದ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ-1 ಮತ್ತು 2 ರಲ್ಲಿ 4 ರಿಂದ 5 ಜನ ಎಂದು ಬರೆದಿರುತ್ತೇವೆ. ನಿಖರವಾಗಿ ಎಷ್ಟು ಜನ ಎಂದು ಬರೆದಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಹೇಳಿಕೆಯಲ್ಲಿ 5 ಜನ ಎಂದು ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಘಟನಾ ಸ್ಥಳಕ್ಕೆ ಠಾಣೆಯಿಂದ ಬಂದ ಒಂದು ನಿಮಿಷದ ನಂತರ ಚಾಸಾ-4 ಮತ್ತು 5 ರವರು ಬಂದಿರುತ್ತಾರೆ.ನಿಪಿ-3 ರಿಂದ 16 ರಲ್ಲಿಜಾನುವಾರುಗಳಿಗೆ ಯಾವುದೇ ಗಾಯಗಳು ಆಗಿವುದು ಕಂಡು ಬಂದಿರುವುದಿಲ್ಲ.

ನಾನು ಚಾಸಾ-4 ಮತ್ತು 5 ರವರು ಸ್ಥಳಕ್ಕೆ ಬಂದ ಬಗ್ಗೆ ವಿಡಿಯೋ ಹಾಗೂ ಫೋಟೋಗಳನ್ನು ತೆಗೆದಿರುವುದಿಲ್ಲ ಎಂದರೆ ಸಾಕ್ಷಿಯು ನಾನು ತೆಗೆದಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಂದೆ ಈ ಪ್ರಕರಣಕ್ಕೆ ಸಂಬಂಧಿಸಿಸಿದಂತೆ ಯಾವುದೇ ಗುರುತು ಪತ್ತೆ ಕವಾಯತು ನಡೆಸಿರುವುದಿಲ್ಲ. ನಾನು ಹೆಬ್ರಿ ಠಾಣೆಯಲ್ಲಿ ಮುಖ್ಯ ಪೇದೆ ದಾಮೋದರ್ ರವರಿಗೆ ಸಹಾಯಕನಾಗಿ ಅವರ ಉಕ್ತಲೇಖನದಂತೆ ದಾಖಲೆಗಳನ್ನು ಬರೆಯುತ್ತಿದ್ದೇನು. ಆರೋಪಿಗಳನ್ನು ನೋೕಡಿದ ಬಗ್ಗೆ ಅವರ ಚಹರೆಯ ಗುರುತನ್ನು ದಾಖಲಿಸಬೇಕು ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಾನು ಚಾಸಾ-1 ರವರ ಉಕ್ತಲೇಖನದಂತೆ ದಾಖಲೆ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಹೇಳಿಕೆಯಲ್ಲಾಗಲಿ, ಮುಂದುವರಿದು ಹೇಳಿಕೆಯಲ್ಲಾಗಲೀ ಆರೋಪಿಗಳ ಚಹರೇ ಗುರುತನ್ನು ಹೇಳಿರುವುದಿಲ್ಲ ಎಂದರೆ ಸರಿ. ನಮ್ಮ ಠಾಣೆಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಜಾನುವಾರುಗಳು ಕಳ್ಳತನವಾದ ಬಗ್ಗೆ ದೂರು ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಾಗುವುದಿಲ್ಲ ಎಂದುನುಡಿಯುತ್ತಾರೆ. ಸದರಿ ದೂರಗಳನ್ನು ಠಾಣಾ ಮುಖ್ಯ ಪೇದೆ , ಉಪನೀರಿಕ್ಷಕರು ಹಾಗೂ ನೀರಿಕ್ಷಕರು ಪಡೆದುಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ಠಾಣಾ ಅಂಕಿಗೋೕಸ್ಕರ ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲಿರುತ್ತೇನೆ ಎಂದರೆ ಸರಿಯಲ್. ನಾವು ಯಾವುದೆ ವಸ್ತುಗಳನ್ನು ಸ್ವಾ ಧೀನಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-3 ರಿಂದ 16 ರಲ್ಲಿರುವ ಭಾವಚಿತ್ರಕ್ಕೂ ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸೊತ್ತು ಸ್ವಾ ಧೀನ ಮತ್ತು ಸ್ಥಳ ಮಹಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-6 ರವರ ಅಂಗಡಿಗೆ ಜಖಂ ಅಗಿದೆ ಎಂದರೆ ಸರಿಯಲ್ಲ. 3 ಜನಆರೋಪಿತರ ಹೆಸರನ್ನು ಪ್ರಪ್ರಥವಾಗಿ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ